ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ.

ಸಿಸಿ ನಂಃ **582/2017**

| | |
|---|---|
| **ಸಾಕ್ಷಿದಾರನ ಹೆಸರು** | ಚಂದ್ರಕಾಂತ |
| **ತಂದೆ/ಗಂಡ/ತಾಯಿ ಹೆಸರು** | ಲಿಂಗಪ್ಪ |
| **ವಯುಸ್ಸು** | **59** ವರ್ಷ |
| **ಉದ್ಯೋಗ** | ತಹಶೀಲ್ದಾರ ನಿರೀಕ್ಷಣಾ ಅವಧಿ ಕಂದಾಯ ಇಲಾಖೆ ಬೆಂಗಳೂರು |
| **ವಾಸಸ್ಥಳ** | ಬೆಂಗಳೂರು |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 18-01-2024** |

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ದಿನಾಂಕಃ **26-08-2018** ರಿಂದ **31-03-2018** ರವರೆಗೆ ನಾನು ಗಂಗಾವತಿಯಲ್ಲಿ ತಹಶೀಲ್ದಾರ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕಃ **12-09-2016** ರಂದು ಕೀರ್ತಿ ರೈಸ್ ಇಂಡಸ್ಟ್ರೀಸ್ ದಾಸನಾಳದಲ್ಲಿ ಸರ್ಕಾರದಿಂದ ವಿತರಣೆ ಆಗುವ ಅಕ್ಕಿ ಮತ್ತು ಗೋಧಿಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿರುತ್ತಾರೆ ಎಂದು ದೂರು ಬಂದ ಹಿನ್ನೆಲೆಯಲ್ಲಿ ರಾತ್ರಿ **1-00** ಗಂಟೆ ಸಮಾರಿಗೆ ನಮ್ಮ ಕಚೇರಿಯ ಸಿಬ್ಬಂದಿಯಾದ ಚಾಸಾ-**7** ರಿಂದ **13** ಸಮೇತ ಹೋಗಿ ಸದರಿ ರೈಸ್ ಮಿಲ್ ಪರಿಶೀಲನೆ ಮಾಡಲಾಗಿ ಅದರಲ್ಲಿ **112** ಕ್ವಿಂಟಾಲ ಅಕ್ಕಿ, **63.50** ಕ್ವಿಂಟಾಲ ಗೋದಿ ಇದ್ದು ಅದರ ಅಂದಾಜು ಮೌಲ್ಯ ರೂ.**4,02,863/-** ಇರುತ್ತದೆ. ಅವುಗಳನ್ನು ನಾವು ರಾತ್ರಿ ಜಪ್ತ ಮಾಡಿಕೊಂಡು ಅವುಗಳನ್ನು ಗೋದಾಮಿಗೆ ತೆಗೆದುಕೊಂಡು ಹೋಗಲು ಹಮಾಲರು ಸಿಗದೇ ಇರುವುದರಿಂದ ಸದರಿ ರೈಸ್ ಮಿಲ್ ಗೇಟ್‌ಗೆ ಸೀಲ್ ಮಾಡಿ ಮರಳಿ ನಾವು ಬಂದಿರುತ್ತೇವೆ. ನಂತರ ದಿನಾಂಕಃ **13-09-2016** ರಂದು ಮರಳಿ

ನಾವು ರೈಸ್ ಮಿಲ್ ಗೆ ಬೆಳಿಗ್ಗೆ **11-30** ಗಂಟೆಗೆ ಹೊಗಿ ಜಪ್ತ ಮಾಡಿಕೊಂಡಿರುವ ಅಕ್ಕಿ ಮತ್ತು ಗೋದಿ ಚೀಲನಗಳನ್ನು ಪರಿಶೀಲನೆ ಮಾಡಿದಾಗ ಸದರಿ ಮಿಲ್ ಮಾಲೀಕರು ಪಡಿತರ ಅಕ್ಕಿ ಮತ್ತು ಗೋದಿ ಚೀಲಗಳನ್ನು ತೆಗೆದು ಅದರ ಬದಲು ಕುಚಲಕ್ಕಿಯ ಚೀಲಗಳನ್ನು ಇಟ್ಟಿದ್ದರು. ಸದರಿ ಕುಚಲಕ್ಕಿ **161** ಚೀಲಗಳು ಇದ್ದು ಒಂದು ಚೀಲ **50** ಕೆ.ಜಿ. ತೂಕದ್ದು ಇತ್ತು. ಸದರಿ ಕುಚಲಕ್ಕಿಯ ಚೀಲಗಳನ್ನು ಕೆ.ಎಸ್.ಎಫ್.ಸಿ.ಎಸ್. ಗೋಡೌನ್ ಗಂಗಾವತಿಗೆ ತೆಗೆದುಕೊಂಡು ಹೋಗಿ ಅಲ್ಲಿ ಇದ್ದ ಸಹಾಯಕ ಜುಬೇರ ಇತನಿಗೆ ನೀಡಿ ಅವರಿಂದ ರಶೀದಿಯನ್ನು ಪಡೆದುಕೊಂಡಿರುತ್ತೇವೆ. ನಂತರ ವೆಂಕಟರೆಡ್ಡಿ ತಂದೆ ರಾಮಕೃಷ್ಣ ರೆಡ್ಡಿ ಸಾಃರಾಂಪೂರ ಇವರು ಕೀರ್ತಿ ರೈಸ್ ಇಂಡಸ್ಟ್ರೀಸ್ ಇವರ ವಿರುದ್ಧ ಫಿರ್ಯಾದಿಯನ್ನು ನೀಡಿರುತ್ತೇನೆ. ಸದರಿ ಫಿರ್ಯಾದಿಯನ್ನು ಪಡಿತರ ಅಕ್ಕಿ ಮತ್ತು ಗೋದಿ ಚೀಲಗಳನ್ನು ಬದಲಾವಣೆ ಮಾಡಿರುವ ಕುರಿತು ನೀಡಿರುತ್ತೇನೆ.

**3.** ಸಾಕ್ಷಿಗೆ ನಿಪಿ**-1** ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ**-1**(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫಿರ್ಯಾದಿಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಫಿರ್ಯಾದಿಯನ್ನು ನಿಪಿ**-2** ಎಂದು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕಃ **13-09-2016** ರ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಮತ್ತು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ**-3** ಎಂದು ಸಾಕ್ಷಿಯ ಸಹಿಯನ್ನು ನಿಪಿ**-3**(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಸಿ.ಡಿ.ಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ**-4** ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಎಂ.ಡಿ.ಎಫ್. ಆರೋಪಿ ಪರ ವಕೀಲರಿಂದಃ</u>

**4.** ಆಹಾರ ನಿರೀಕ್ಷಕರು ಗ್ರಾಮೀಣ ಹಾಗೂ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದರೆ ಸರಿ. ದಿನಾಂಕಃ **12-09-2016** ರಂದು ಗ್ರಾಮೀಣ ವ್ಯಾಪ್ತಿಯಲ್ಲಿ ಆಹಾರ ನಿರೀಕ್ಷಕರು ಎಂದು ಹೆಚ್.ಐ. ಬಗಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನಗೆ ಮಾಹಿತಿ ಬಂದಾಗ ಹೆಚ್.ಐ. ಬಗಲಿಯವರು ಕರ್ತವ್ಯದಲ್ಲಿ ಇದ್ದ ಆಹಾರ ನಿರೀಕ್ಷಕರನ್ನು ನಾನು ಗುನ್ಹಾ ಸ್ಥಳಕ್ಕೆ ಬರಮಾಡಿಕೊಂಡಿರುವುದಿಲ್ಲ. ನಮ್ಮ ಆಹಾರ ಶಿರಸ್ತೇದಾರರು ಸದರಿ ಅಕ್ಕಿ ಮತ್ತು ಗೋದಿ ಪಡಿತರ ಅಕ್ಕಿ ಮತ್ತು ಗೋದಿ ಎಂದು ಹೇಳಿದ್ದರ ಆಧಾರ ಮೇಲೆ ನಾನು ಅವುಗಳು ಪಡಿತರ ಅಕ್ಕಿ ಮತ್ತು ಗೋದಿ ಎಂದು ಹೇಳಿರುತ್ತೇನೆ.

**5.** ಪಡಿತರ ಅಕ್ಕಿ ಮತ್ತು ಗೋದಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಪಡಿತರ ಚೀಟಿಯ ಫಲಾನುಭವಿಗಳಿಗೆ ವಿತರಿಸಲಾಗುತ್ತದೆ ಎಂದರೆ ಸರಿ. ಪ್ರತಿ ತಿಂಗಳು ಪ್ರತಿ ಜಿಲ್ಲೆಗೆ ಇಂತಿಷ್ಟು ಪ್ರಮಾಣದ ಆಹಾರವನ್ನು ವಿತರಣೆ ಮಾಡಲಾಗುತ್ತದೆ ಎಂದರೆ ಸರಿ. ಜಿಲ್ಲಾಧಿಕಾರಿಗಳಿಂದ ಪ್ರತಿ ತಾಲೂಕಿಗೆ ಹಂಚಲಾಗುತ್ತದೆ ಎಂದರೆ ಸರಿ. ಪ್ರತಿ ಊರಿನ ಪ್ರತಿಯೊಂದು ನ್ಯಾಯಬೆಲೆ ಅಂಗಗಳಿಗೆ ಅದರಲ್ಲಿ ಎಷ್ಟು ಪಡಿತರದಾರರು ಇರುತ್ತಾರೆ ಅದರ ಆಧಾರದ ಮೇಲೆ ಧಾನ್ಯವನ್ನು ವಿತರಣೆ ಮಾಡಿರುತ್ತಾರೆ ಎಂದರೆ ಸರಿ. ಎ.ಪಿ.ಎಲ್., ಬಿ.ಪಿ.ಎಲ್. ಹಾಗೂ ಅಂತ್ಯೋದಯ ಪಡಿತರದಾರರಿಗೆ ಪ್ರತ್ಯೇಕವಾಗಿ ಧಾನ್ಯವನ್ನು ವಿತರಣೆ ಮಾಡುತ್ತಾರೆ ಎಂದರೆ ಸರಿ. ಪಡಿತರ ಅಕ್ಕಿ ಮತ್ತು ಗೋದಿ ಪಡಿತರದಾರರಿಗೆ ಹೊರತುಪಡಿಸಿ ಬೇರೆಯವರಿಗೆ ಸಿಗುವುದಿಲ್ಲ ಎಂದರೆ ಸರಿ. ಸದರಿ ಪಡಿತರದಾರರ ಕುಟುಂಬದವರು ಹೆಬ್ಬೆರಳಿನ ಗುರುತು ಹಾಕಿದಾಗ ಮಾತ್ರ ಧಾನ್ಯವನ್ನು ವಿತರಣೆ ಮಾಡಲಾಗುತ್ತದೆ ಎಂದರೆ ಸರಿ.

**6.** ಪ್ರತಿ ತಿಂಗಳ ನ್ಯಾಯಬೆಲೆ ಅಂಗಡಿಗಳು ತಮ್ಮ ಧಾನ್ಯ ಎಷ್ಟು ಖರ್ಚು ಆಗಿರುತ್ತದೆ ಹಾಗೂ ಎಷ್ಟು ಉಳಿದಿರುತ್ತದೆ ಎಂಬ ಸ್ಟಾಕ್ ಮಾಹಿತಿ ನೀಡುತ್ತಾರೆ ಎಂದರೆ ಸರಿ. ಗುನ್ನಾ ಜಾಗೆ ಮತ್ತು ಠಾಣೆಗೆ ಕೇವಲ **10-15** ನಿಮಿಷಗಳ ದಾರಿ ಇದೆ ಎಂದರೆ ಸರಿ. ನನ್ನ ಫಿರ್ಯಾದಿಯಲ್ಲಿ **3** ದಿನ ವಿಳಂಭದ ಬಗ್ಗೆ ಯಾವುದೇ ಸಕಾರಣ ಬರೆದಿರುವುದಿಲ್ಲ ಎಂದರೆ ಸರಿ. ಗುನ್ನಾ ಜಾಗೆ ಗಂಗಾವತಿ ಮತ್ತು ಕೊಪ್ಪಳದ ಹೈವೇ ಹಾಗೂ ದಾಸನಾಳ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಕೀರ್ತಿ ಇಂಡಸ್ಟ್ರೀಸ್ ಸುಮಾರು ಎಷ್ಟು ಎಕರೆಯಲ್ಲಿ ನಿರ್ಮಾಣವಾಗಿದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಕೀರ್ತಿ ಇಂಡಸ್ಟ್ರೀಸ್ ಯಾವ ಸರ್ವೆ ನಂಬರ ಜಮೀನಿನಲ್ಲಿ ಇದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಕೀರ್ತಿ ಇಂಡಸ್ಟ್ರೀಸ್ ನಲ್ಲಿ ಎಷ್ಟು ಗೋಡೌನಗಳು ಇವೆ ಹಾಗೂ ಎಷ್ಟು ರೈಸ್ ಮಿಲ್ ಇವೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು **3-4** ಗೋಡೌನ್ ಹಾಗೂ ಒಂದು ರೈಸ್ ಮಿಲ್ ಇರುತ್ತದೆ ಎಂದು ನುಡಿಯುತ್ತಾರೆ.

**7.** ಕೀರ್ತಿ ಇಂಡಸ್ಟ್ರೀಸ್ ನಲ್ಲಿ ಎಷ್ಟು ಜನ ಪಾಲುದಾರರು ಇದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ಗೋಡೌನಗಳು ಯಾವ ದಿಕ್ಕಿನಕಡೆಗೆ ಮುಖ್ಯವಾಗಿ ಇರುತ್ತವೆ ಎಂದು ನನಗೆ ಹೇಳಲು ನೆನಪಿರುವುದಿಲ್ಲ. ಸಾಮಾನ್ಯವಾಗಿ ಗೋಡೌನಗಳಿಗೆ ನಂಬರಗಳು ಇರುತ್ತವೆ ಎಂದರೆ ಇರಬಹುದು. ನಾವು ಗುನ್ನಾ ಸ್ಥಳಕ್ಕೆ ಭೇಟಿ ನೀಡಿದಾಗ ಸದರಿ ಮಾಲುಗಳು ಯಾವ ಗೋಡೌನಗಳಲ್ಲಿ ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಪಡಿತರ ಅಕ್ಕಿ ಮತ್ತು ಗೋದಿಗಳು ಗೋಣಿ ಚೀಲದಲ್ಲಿ ಸರ್ಕಾರ ಸೀಲ್ ನೊಂದಿಗೆ ಕಟ್ಟಿರುತ್ತಾರೆ ಎಂದರೆ ಸರಿ.

**8.** ನನ್ನ ಜೊತೆ ಸದರಿ ದಿನ ಚಾಸಾ**-7** ರಿಂದ **11** ರವರನ್ನು ಕರೆದುಕೊಂಡು ಹೋಗುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ಗುನ್ನಾ ಸ್ಥಳಕ್ಕೆ

ಭೇಟಿ ನೀಡಿದಾಗ ಸರ್ಕಾರದ ಸೀಲ್ ಮಾಡಿರುವ ಗೋಣಿ ಚೀಲಗಳು ಇದ್ದವು. ಸದರಿ ವಿಷಯವನ್ನು ನಾನು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪಡಿತರ ಅಕ್ಕಿಯನ್ನು ವಿವಿಧ ಬ್ರಾಂಡಿನ ಚೀಲಗಳಲ್ಲಿ ಹಾಕಿದ್ದರು ಎಂದು ನುಡಿಯುತ್ತಾರೆ. ಚಾಸಾ-7 ರಿಂದ 11 ರವರು ಅವರು ಯಾವ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಾರೋ ಅದೇ ಸ್ಥಳದಲ್ಲಿ ಇದ್ದರು, ಅವರು ನನ್ನ ಜೊತೆ ಗುನ್ನಾ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-7 ರಿಂದ 11 ರವರ ಮೇಲಾಧಿಕಾರಿ ಇರುವುದರಿಂದ ಅವರೆಲ್ಲರೂ ನನ್ನ ಜೊತೆ ಗುನ್ನಾ ಸ್ಥಳಕ್ಕೆ ಬಂದಿದ್ದರು ಫಿರ್ಯಾದಿಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರನ್ನು ನಾನು ಫೋನ್ ಮುಖಾಂತರ ನಮ್ಮ ಕಚೇರಿಗೆ ಬರಮಾಡಿಕೊಂಡಿರುತ್ತೇನೆ. ನಂತರ ಅಲ್ಲಿಂದ ಎಲ್ಲರೂ ನಮ್ಮ ವಾಹನದಲ್ಲಿ ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ವಿಷಯವನ್ನು ನಾನು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ಅಕ್ಕಿ ಎಷ್ಟು ವಿಧಗಳಿಂದ ಕೂಡಿದ್ದವು ಎಂದು ನನಗೆ ಈಗ ಹೇಳಲು ಬರುವುದಿಲ್ಲ.

**9.** ಕೀರ್ತಿ ಇಂಡಸ್ಟ್ರೀಸ್ ನಲ್ಲಿ ಇಬ್ಬರು ಪಾಲುದಾರರು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಫಿರ್ಯಾದಿಯಲ್ಲಿ ಪಡಿತರ ಅಕ್ಕಿ ಮತ್ತು ಗೋದಿ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಕ್ಕಿ ಮತ್ತು ಗೋದಿ ಪಡಿತರ ಕಾರ್ಡದಾರರಿಗೆ ಮಾತ್ರ ಸಿಗುತ್ತವೆ. ಆದ್ದರಿಂದ ಸದರಿ ಪಡಿತರ ಅಕ್ಕಿ ಮತ್ತು ಗೋದಿ ಆರೋಪಿಯ ಇಂಡಸ್ಟ್ರೀಸ್ ನಲ್ಲಿ ಇರುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಧಾನ್ಯ ಹೆಚ್ಚು ಉಳಿದಿರುವುದಾಗಲೀ ಅಥವಾ ಕಡಿಮೆ ಉಳಿದಿರುವುದಾಗಲೀ ಇರಲಿಲ್ಲ ಎಂದರೆ ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಆ

ದಿನ ಪಡಿತರ ಅಕ್ಕಿ ಮತ್ತು ಗೋದಿ ಆರೋಪಿಯ ಇಂಡಸ್ಟ್ರೀಸ್ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಕ್ಕಿ ಮತ್ತು ಗೋದಿಯ ಚೀಲಗಳು ಬದಲಾವಣೆ ಮಾಡಿದ್ದು ಅದು ಯಾವ ಗೋಡೌನದಿಂದ ಆಗಿತ್ತು ಎಂದರೆ ಸಾಕ್ಷಿಯು ಗೋಡೌನ ನಂಬರ ನನಗೆ ಹೇಳಲು ಬರುವುದಿಲ್ಲ ಆದರೆ ಸದರಿ ಅದಲುಬದಲು ಆಗಿದ್ದು ನಿಜ ಇರುತ್ತದೆ ಎಂದು ನುಡಿಯುತ್ತಾರೆ.

**10.** ಕೀರ್ತಿ ಇಂಡಸ್ಟ್ರೀಸ್ ನಲ್ಲಿ ಇರುವ ಕುಚಲಕ್ಕಿ ಚೀಲಗಳನ್ನು ಲಾರಿ ಮುಖಾಂತರ ಗೋಡೌನಗೆ ಸಾಗಾಟ ಮಾಡಿರುತ್ತೇವೆ. ಸದರಿ ಗಾಡಿ ನಂಬರ, ಮಾಲೀಕ ಹಾಗೂ ಚಾಲಕನ ಹೆಸರು ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಕ್ಕಿ ಚೀಲಗಳನ್ನು ವೇಬ್ರೀಜ್ ಮಾಡಿಸಿರುವುದಿಲ್ಲ. ನಾನು ಸದರಿ ಘಟನೆ ಕುರಿತು ವೀಡಿಯೋ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವೀಡಿಯೋ ವಿಶ್ವನಾಥ ಎಂಬ ನಮ್ಮ ಸಿಬ್ಬಂದಿಯ ಮೊಬೈಲನಲ್ಲಿ ಮಾಡಿ ನಂತರ ಅದರ ಸಿ.ಡಿ.ಯನ್ನು ಮಾಡಿರುತ್ತೇವೆ. ಸದರಿ ಮೊಬೈಲ್ ಪೊಲೀಸರಿಗೆ ನೀಡಿರುವುದಿಲ್ಲ ಕೇವಲ ಸಿ.ಡಿ.ಯನ್ನು ನೀಡಿರುತ್ತೇವೆ. ವಿಶ್ವನಾಥ ರವರು ರಾತ್ರಿ **1-00** ಗಂಟೆ ಮೇಲೆ ವೀಡಿಯೋ ಮಾಡಿರುತ್ತಾರೆ. ಸದರಿ ವಿಷಯವನ್ನು ನಾನು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ವಿಶ್ವನಾಥ ರವರ ಮೊಬೈಲದಿಂದ ವೀಡಿಯೋ ಮಾಡಿ ಸಿ.ಡಿ. ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಡೌನಗಳಿಗೆ ಶೆಟರ್ಸ ಇರುತ್ತವೆ ಎಂದರೆ ಸಾಕ್ಷಿಯು ನಾವು ಹೋಗಿದ್ದ ಗೋಡೌನಗೆ ಶೆಟರ್ಸ ಇರಲಿಲ್ಲ ಎಂದು ನುಡಿಯುತ್ತಾರೆ. ಎಲ್ಲ ಗೋಡೌನಗಳಿಗೆ ಸಾಮಾನ್ಯವಾಗಿ ಶೆಟರ್ಸ ಇರುತ್ತವೆ ಆದರೂ ನಾನು ಶೆಟರ್ಸ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇನ್ ಗೇಟಗೆ ಬೀಗ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿಯೊಂದು

ಗೋಡೌನಗೆ ವಾಚಮೆನ್ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಜಪ್ತ ಮಾಡಿರುವ ಅಕ್ಕಿ ಮತ್ತು ಗೋದಿ ಚೀಲಗಳನ್ನು ನೋಡಿಕೊಳ್ಳಲು ನಮ್ಮ ಗ್ರಾಮ ಸಹಾಯಕರಿಗೆ ನಿರ್ದೇಶನ ನೀಡಿರುತ್ತೇನೆ. ಸದರಿ ವಿಷಯ ನಾನು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ದಿನ ನಾನು ಗುನ್ನಾ ಜಾಗಾಕ್ಕೆ ನಮ್ಮ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯ ಎಲ್ಲ ಸುಳ್ಳು ಇದೆ ಎಂದರೆ ಸರಿಯಲ್ಲ. ಸದರಿ ಗೇಟಿಗೆ ನಾವು ಸೀಲ್ ಮಾಡಿ ಬೀಗ ಹಾಕಿರುವುದು ಮುರಿದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಇನ್ನೊಂದು ಸಣ್ಣ ಗೇಟ್ ನಿಂದ ಹೋಗಿ ಪಡಿತರ ಅಕ್ಕಿ ಮತ್ತು ಗೋದಿಯನ್ನು ಅದಲಿಬದಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯ ನಾನು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ಸೀಲ್ ಮೇಲೆ ಯಾವುದೇ ಹಸ್ತಾಕ್ಷರ ಇರುವುದಿಲ್ಲ. ಗುನ್ನಾ ಜಾಗೆಯ ಉತ್ತರಕ್ಕೆ ಏನು ಇದೆ ಎಂದು ನನಗೆ ಈಗ ನೆನಪಿರುವುದಿಲ್ಲ. ನಾನು ಗುನ್ನಾ ಜಾಗಾಕ್ಕೆ ಭೇಟಿ ನೀಡಿರುವುದಿಲ್ಲ ನಮ್ಮ ಇಲಾಖೆಯ ಅಂಕೆ ಸಂಖ್ಯೆಗೋಸ್ಕರ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ಫಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಡಿತರ ಅಕ್ಕಿ ಮತ್ತು ಗೋದಿ ಆರೋಪಿಯ ಮಿಲ್ ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**11.** ನಾನು ಆ ದಿನ ಪೊಲೀಸರನ್ನು ಗುನ್ನಾ ಸ್ಥಳಕ್ಕೆ ಕರೆಸಿರುವುದಿಲ್ಲ. ಪಂಚನಾಮೆಯನ್ನು ನಮ್ಮ ಕಾರ್ಯಾಲಯದಲ್ಲಿ ತಯಾರಿಸಿ ಪಂಚರ ಸಹಿಯನ್ನು ನಮ್ಮ ಕಾರ್ಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಂಚರು ಗುನ್ನಾ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ದಿನಾಂಕಃ **13-09-2016** ರಂದು ಬೆಳಗಿನ ಜಾವ **1-00** ಗಂಟೆಗೆ ಮಾಡಿರುತ್ತೇವೆ. ಪಂಚನಾಮೆಯನ್ನು

ವೆಂಕಟಗಿರಿ ಗ್ರಾಮ ಲೆಕ್ಕಾಧಿಕಾರಿ ನಾನು ಹೇಳಿದ ಹಾಗೆ ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ದಿನಾಂಕಃ **13-09-2016** ರಂದು ಮಾಡಿರುತ್ತೇವೆ ಹಾಗೂ ಯಾವ ಸಮಯದಂದು ಮಾಡಿರುತ್ತೇವೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರನ್ನು ಫೋನೀನ ಮುಖಾಂತರ ಕರೆಸಿರುತ್ತೇನೆ ಎಂದು ನನ್ನ ಫಿರ್ಯಾದಿಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹೇಳಿರುವ ವಿಷಯ ಎಲ್ಲ ಸತ್ಯಕ್ಕೆ ದೂರವಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ **18-01-2024** ರಂದು ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಪ್ರ.ದ.ನ್ಯಾ.ದಂ.ಗಳು
ಗಂಗಾವತಿ.